**ಎಸ್ ಸಿ ನಂ.121/2021 ಪಿಡಬ್ಲ್ಯೂ.27**

**ಮಧ್ಯಂತರ ಅರ್ಜಿ ಮೇಲಿನ ಆದೇಶ ದಿನಾಂಕ 24.11.2025ರ ಆದೇಶದಂತೆ ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣವಚನ ಬೋಧಿಸಿದ ದಿನಾಂಕ 04.12.2025.**

**ಪಾಟೀ ಸವಾಲುಃ ಆರೋಪಿತರ ಪರ ಶ್ರೀ ಬಿ ಆರ್ ವಿ ವಕೀಲರಿಂದಃ**

1. ರಾತ್ರಿ 10.00 ಗಂಟೆ ಸಮಯಕ್ಕೆ ತನಿಖಾಧಿಕಾರಿಗಳು ನನಗೆ ಅವರ ಜೊತೆ ಪಂಚನಾಮೆ ಬರಲು ತಿಳಿಸಿರುತ್ತಾರೆ. ದೂರು ಸುಮಾರು ರಾತ್ರಿ 9.00 ರಿಂದ 9.30 ರವರೆಗೆ ದಾಖಲು ಆಗಿರಬಹುದು. ನಮ್ಮ ಠಾಣೆಯಿಂದ ಗೆಜ್ಜಲಗೆರೆ ಸುಮಾರು 4-5 ಕಿ.ಮೀ. ದೂರ ಇದೆ. ಆ ಸಮಯದಲ್ಲಿ ಬೆಂಗಳೂರು-ಮೈಸೂರು ಹೊಸ ಹೆದ್ದಾರಿ ನಿರ್ಮಾಣ ಹಂತದಲ್ಲಿತ್ತು ಎಂದರೆ ಸರಿ. ಠಾಣೆಯಿಂದ ರಾತ್ರಿ ಸುಮಾರು 10-00 ಗಂಟೆಗೆ ಹೊರಟಿದ್ದೇವೆ. ಠಾಣೆಯಿಂದ ಸದರಿ ಸ್ಥಳಕ್ಕೆ ಸುಮಾರು 5-6 ನಿಮಿಷದಲ್ಲಿ ತಲುಪಬಹುದು. ಸ್ಥಳದಲ್ಲಿ ಸೇರಿದ್ದ ಜನರನ್ನೇ ಮಹಜರು ಸಾಕ್ಷಿಗಳು ಕರೆದಿದ್ದೇವೆ. ಆ ಸಮಯದಲ್ಲಿ ತನಿಖಾಧಿಕಾರಿಗಳು ಅವರಿಗೆ ನೋಟಿಸು ನೀಡಿದ್ದಾರೆ. ಪಂಚರಿಗೆ ನೀಡುವ ನೋಟಿಸು ಫಾರ್ಮೇಟ್ ಅನ್ನು ತುಂಬಿಸಿ ಸ್ಥಳದಲ್ಲಿಯೇ ನೋಟಿಸು ನೀಡಿದ್ದಾರೆ. ಹೆಣ ಬಿದ್ದಿದ್ದ ಜಾಗ ಟಾರ್ ಅನ್ನು ಕಿತ್ತು ಹಾಕಿದ ಮಣ್ಣಿನ ರಸ್ತೆಯಾಗಿತ್ತು. ಸದರಿ ಹೆಣ ಬಿದ್ದ ಜಾಗದಿಂದ ಅತ್ಯಂತ ಹತ್ತಿರದ ಮನೆ ಎಷ್ಟು ದೂರ ಇತ್ತು ಎಂದು ನೆನಪಿಲ್ಲ. ಹೆಣ ಇದ್ದ ಜಾಗದಿಂದ ವಿದ್ಯುತ್ ದೀಪ ಇರುವ ಕಂಬ ಎಷ್ಟು ದೂರ ಇತ್ತು ಎಂದು ನೆನಪಿಲ್ಲ. ವಿದ್ಯುತ್ ದೀಪಗಳಿರುವ ಕಂಬ ಆ ಸ್ಥಳದಲ್ಲಿತ್ತು. ಆ ಸ್ಥಳದಿಂದ ವಿದ್ಯುತ್ ದೀಪ ಇರುವ ಕಂಬ ಎಷ್ಟು ದೂರ ಇತ್ತು ಎಂದು ಅಳತೆ ಮಾಡಿಲ್ಲ. ಕೃತ್ಯ ಸ್ಥಳದಿಂದ ಗ್ರಾಮದ ಕಡೆಗೆ ಒಂದು ವಿಶ್ವೇಶ್ವರಯ್ಯನವರ ಪ್ರತಿಮೆ ಇದೆ ಎಂದರೆ ಸರಿ. ವಿದ್ಯುತ್ ಕಂಬ ಹೆಣ ಇದ್ದ ಜಾಗ ಮತ್ತು ಸದರಿ ಮೇಲೆ ಹೇಳಿದ ಪ್ರತಿಮೆಯ ಮಧ್ಯ ಭಾಗದಲ್ಲಿ ಇತ್ತೇ ಅಥವಾ ಬೇರೆ ಕಡೆ ಇತ್ತೇ ಎಂದು ಜ್ಞಾಪಕವಿಲ್ಲ. ಸದರಿ ಪ್ರತಿಮೆ ಕುದುರುಗುಂಡಿಗೆ ಹೋಗುವ ರಸ್ತೆ ಪ್ರಾರಂಭವಾಗುವ ಸರ್ಕಲ್ ನಿಂದ ಪಶ್ಚಿಮಕ್ಕಾದಂತೆ ಸುಮಾರು 80-100 ಮೀಟರ್ ದೂರದಲ್ಲಿದೆ. ಸರ್ಕಲ್ ನಿಂದ ಪೂರ್ವದ ಕಡೆಗೆ ಯಾವುದೇ ಮನೆಗಳು ಇಲ್ಲ. ಒಂದು ಗ್ರಾಮ ಪಂಚಾಯಿತಿ ಕಾರ್ಯಾಲಯ ಕಟ್ಟಡ ಇದೆ. ಪಶ್ಚಿಮ ದಿಕ್ಕಿಗೆ ಒಂದು ಶಾಲೆ ಮತ್ತು ಮನೆಗಳು ಇವೆ. ಸದರಿ ಸರ್ಕಲ್ ನಿಂದ ಸುಮಾರು 120 ಮೀಟರ್ ದೂರದ ತನಕ ಮನೆಗಳು ಇವೆ. ರಸ್ತೆ ಕಾಮಗಾರಿ ನಡೆಯುತ್ತಿದುದರಿಂದ ರಸ್ತೆಯನ್ನು ಅಗಲ ಮಾಡುತ್ತಿದ್ದರು ಮತ್ತು

ಕೆಲವು ಕಟ್ಟಡಗಳನ್ನು ಒಡೆದು ಹಾಕಿದ್ದರು ಎಂದರೆ ಸರಿ. ಕಾಮಗಾರಿ ನಡೆಯುತ್ತಿದುದ್ದರಿಂದ ವಿಶ್ವೇಶ್ವರಯ್ಯನವರ ಪ್ರತಿಮೆಯನ್ನು ಅಲ್ಲಿಂದ ಗ್ರಾಮ ಪಂಚಾಯಿತಿ ಕಾರ್ಯಾಲಯಕ್ಕೆ ಸ್ಥಳಾಂತರಿಸಿದ್ದರು ಎಂದರೆ ಗೊತ್ತಿಲ್ಲ. ಶವ ಇದ್ದ ಜಾಗದಲ್ಲಿ ಯಾವುದೇ ದೀಪದ ಬೆಳಕು ಇರಲಿಲ್ಲ ಎಂದರೆ ಸರಿ. ಶವ ಇದ್ದ ಜಾಗದ ಅಕ್ಕ ಪಕ್ಕ ಟೈರು ಗುರುತು ಇದ್ದದ್ದನ್ನು ಗಮನಿಸಲಿಲ್ಲ. ಸದರಿ ಮಹಜರಿನಲ್ಲಿ ಟಾರು ರಸ್ತೆಯಿಂದ ಶವ ಎಷ್ಟು ದೂರ ಇದೆ ಎಂದು ನಮೂದು ಇದೆ. ಮುಖ್ಯರಸ್ತೆಯಿಂದ ಗೆಜ್ಜಲಗೆರೆ ರಸ್ತೆಗೆ ಬರಲು ಮಣ್ಣಿನ ರಸ್ತೆಯಿಂದಲೇ ಬರಬೇಕು ಎಂದರೆ ಸರಿಯಲ್ಲ. ಶವ ಇದ್ದ ಜಾಗದಲ್ಲಿ ಪಾದರಕ್ಷೆ ಗುರುತುಗಳು ಇದ್ದವು. ಅದನ್ನು ತನಿಖಾಧಿಕಾರಿಗಳು ನಮೂದು ಮಾಡಿಕೊಂಡಿಲ್ಲ. ಶವ ಇದ್ದ ಜಾಗದಿಂದ ವಿಶ್ವೇಶ್ವರಯ್ಯನ ಪ್ರತಿಮೆ ಸುಮಾರು 80-100 ಮೀಟರ್ ದೂರದಲ್ಲಿತ್ತು. ಕೃತ್ಯ ಸ್ಥಳದ ಮಹಜರು ತನಿಖಾಧಿಕಾರಿಗಳು ಮಾಡುವಾಗ ನಾನು ಹಾಜರು ಇದ್ದೆ ಎಂದು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ತನಿಖಾಧಿಕಾರಿಗಳು ಉಕ್ತಲೇಖನ ಕೊಟ್ಟು ಮಹಜರು ಬರೆಸಿದರು. ಗೆಜ್ಜಲಗೆರೆ ಬಳಿಯ ಮೈಸೂರು-ಬೆಂಗಳೂರು ರಸ್ತೆ ನೇರವಾಗಿಲ್ಲ, ಡೊಂಕಾದ ರಸ್ತೆ ಎಂದರೆ ಸರಿಯಲ್ಲ. ವಿಶ್ವೇಶ್ವರಯ್ಯನವರ ಪ್ರತಿಮೆ ಇರುವ ಸ್ಥಳದಿಂದ ಹೆಣ ಇರುವ ಜಾಗ ಕಾಣುವುದಿಲ್ಲ ಎಂದರೆ ಸರಿಯಲ್ಲ.

2. ನಿಪಿ.2 ಮಹಜರು ಮುಗಿದ ನಂತರ ಕಾರು ಅಮಾನತ್ತು ಪಂಚನಾಮೆಯ ಜಾಗಕ್ಕೆ ಹೋಗಿದ್ದೇನೆ. ಕಾರು ನಿಂತ ಜಾಗದಿಂದ ಕುದುರುಗುಂಡಿ ಗ್ರಾಮ ಎಷ್ಟು ದೂರ ಇದೆ ಎಂದು ನನಗೆ ನೆನಪಿಲ್ಲ. ನಾನು ಕೆಲವೊಂದು ಸಲ ನಮ್ಮ ಠಾಣಾ ವ್ಯಾಪ್ತಿಯೊಳಗೆ ಗಸ್ತಿಗೆ ಹೋಗಿದ್ದೇನೆ. ಕಾರು ಅಮಾನತ್ತು ಪಂಚನಾಮೆಗಿಂತ ಮೊದಲು ನಾನು ಕುದುರುಗುಂಡಿ ಗ್ರಾಮಕ್ಕೆ ಹೋಗಿದ್ದೆ. ಕಾರಿನ ಬಳಿ ನಾವು ಹೋದಾಗ ಕುದುರುಗಂಡಿ ಗ್ರಾಮಸ್ಥರು ಇರಲಿಲ್ಲ. ಸಾಕ್ಷಿ ಮುಂದುವರಿದು ಕೆಲವೊಂದು ಜನರು ಇದ್ದರು ಎಂದು ನುಡಿಯುತ್ತಾರೆ. ಕಾರನ್ನು ಯಾರು ತಂದು ನಿಲ್ಲಿಸಿದರು ಎಂದು ಮತ್ತು ಯಾವಾಗ ನಿಲ್ಲಿಸಿದರು ಎಂದು ಆ ಜನರು ಹೇಳಿಲ್ಲ. ಸ್ಥಳ ತನಿಖಾ ಸಮಯದಲ್ಲಿ ಸದರಿ ಕಾರು ಗೆಜ್ಜಲಗೆರೆ ಕಡೆಯಿಂದ ಕುದುರುಗುಂಡಿ ಕಡೆಗೆ ಹೋದ ಬಗ್ಗೆ ಯಾರೂ ಹೇಳಿಲ್ಲ. ಗೆಜ್ಜಲಗೆರೆ ಕಡೆಯಿಂದ ಕುದುರುಗುಂಡಿ ಕಡೆಗೆ ಯಾರಾದರೂ ಹೋದರೆ ಪಂಚಾಯತ್ ಕಾರ್ಯಾಲಯದಲ್ಲಿ ಅಳವಡಿಸಿರುವ ಸಿಸಿ ಟಿವಿ ಕ್ಯಾಮೇರಾದಲ್ಲಿ ದೃಶ್ಯ ನಮೂದು ಆಗುತ್ತದೆಂದರೆ ಗೊತ್ತಿಲ್ಲ. ಪಂಚಾಯಿತಿ ಕಾರ್ಯಾಲಯದ ಪಕ್ಕದಲ್ಲಿ ಒಂದು ವ್ಯವಸಾಯ ಸೇವಾ ಸಹಕಾರ ಸಂಘ ಇದೆ

ಎಂದರೆ ನಾನು ಗಮನಿಸಿಲ್ಲ. ಕಾರನ್ನು ಪರಿಶೀಲಿಸುವಾಗ ವಿಡಿಯೋ ಮಾಡಿಲ್ಲ, ಆದರೆ ಫೋಟೋ ತೆಗೆದಿದ್ದೇನೆ. ಕಾರಿನ ಒಳಭಾಗ ಪರಿಶೀಲನೆ ಮಾಡಿಲ್ಲ. ನಾನು ಕಾರಿನ ಒಳಭಾಗ ಅಥವಾ ಹೊರಭಾಗ ರಕ್ತದ ಕಲೆ ಗಮನಿಸಿಲ್ಲ. ಕಾರನ್ನು ಸ್ಥಳದಿಂದ ಠಾಣೆಗೆ ಕೊಂಡು ಹೋಗಲು ನಮ್ಮ ತನಿಖಾಧಿಕಾರಿಗಳು ಠಾಣಾ ಸಿಬ್ಬಂದಿಗೆ ಹೇಳಿದ್ದಾರೆ. ಸದರಿ ನಿಪಿ.42 ಮಹಜರು ಕಾಲಕ್ಕೆ ಕೂಡ ನಾನು ಹಾಜರು ಇರಲಿಲ್ಲ ಎಂದರೆ ಸರಿಯಲ್ಲ. ನಿಪಿ.45 ಶವ ತನಿಖಾ ವರದಿಯನ್ನು ನಾನು ಮಂಡ್ಯ ಮಿಮ್ಸ್ ಆಸ್ಪತ್ರೆಯಲ್ಲಿ ಬರೆದಿಲ್ಲ ಅದನ್ನು ಠಾಣೆಯಲ್ಲಿ ಬರೆದಿದ್ದು ಎಂದರೆ ಸರಿಯಲ್ಲ. ಅದನ್ನು ಠಾಣೆಯಲ್ಲಿ ಬರೆದಿದ್ದ ಕಾರಣ ದಿನಾಂಕ 18.05.2021 ರಂದು ನ್ಯಾಯಾಲಯಕ್ಕೆ ಸಲ್ಲಿಸಿದ್ದು ಎಂದರೆ ಸರಿಯಲ್ಲ. ಆ ಸಮಯದಲ್ಲಿ ನಾನು ಫೋಟೋ ತೆಗೆದಿದ್ದೇನೆಂದು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ನಾನು ನಿಪಿ.95 ಫೋಟೋಗಳನ್ನು ತೆಗೆದಿಲ್ಲ ಎಂದರೆ ಸರಿಯಲ್ಲ.

3. ಅದೇ ರೀತಿ ನಾನು ದಿನಾಂಕ 16.05.2021 ರಂದು, 17.05.2021, 18.05.2021, 19.05.2021 ರಂದು ನಿಪಿ.47, ನಿಪಿ.48, ನಿಪಿ.50, ನಿಪಿ.51, ನಿಪಿ.53, ನಿಪಿ.54, ನಿಪಿ.56, ನಿಪಿ.58 ರಿಂದ ನಿಪಿ.79, ನಿಪಿ.32 ರಿಂದ ನಿಪಿ.35 ರಂತೆ ಯಾವುದೇ ಫೋಟೋಗಳನ್ನು ತೆಗೆದಿಲ್ಲ ಎಂದರೆ ಸರಿಯಲ್ಲ. ದಿನಾಂಕ 19.05.2021 ರಂದು ನಾನು ತೆಗೆದ ಫೋಟೋಗಳ ಪ್ರಿಂಟ್ ತೆಗೆದು ತನಿಖಾಧಿಕಾರಿಗಳಿಗೆ ನೀಡಿದ್ದೇನೆಂದು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ.

(ಮರು ವಿಚಾರಣೆಃಇಲ್ಲ)

(ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಿದೆ.)

ಓ.ಹೇ.ಕೇ.ಸ.ಒ.

(ಯಾದವ ಕೆ.)
4 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಮಂಡ್ಯ.